**ದಿನಾಂಕಃ 15-06-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ. ಡಿ . ಎನ್ . ವಕೀಲರಿಂದ**

ದಿನಾಂಕಃ 06.4.2017 ರಂದು ಎಷ್ಟು ಒಪ್ಪಂದಗಳು ಆಗಿರುತ್ತವೆ ಎಂದರೆ ನನ್ನ ಸಮಕ್ಷಮ 1 ನೇ ಪ್ರತಿವಾದಿ ರೂ. 1,30,000/- ಹಣ ಪಡೆದ ಸಂಬಂಧ ಒಪ್ಪಂದ ಆಗಿರುತ್ತದೆ . 1 ನೇ ಪ್ರತಿವಾದಿ ಜಮೀನಿನ ಸಂಬಂಧ ರೂ. 1,30,000/- ಹಣ ಪಡೆದಿರುತ್ತಾರೆ ಎಂದರೆ ಸರಿ . ಸದರಿ ರೂ. 1,30,000/- ಹಣ ಪಡೆದುಕೊಂಡು ವಾದಿ ಹಾಗೂ 1 ನೇ ಪ್ರತಿವಾದಿ ಒಪ್ಪಂದ ಮಾಡಿಕೊಂಡಿರುತ್ತಾರೆ ಎಂದರೆ ಸರಿ . ದಿನಾಂಕಃ 06.04.2017 ರಂದು ಕ್ರಯದ ಕರಾರು ಮಾತ್ರ ಆಗಿರುತ್ತದೆ ಎಂದರೆ ಸರಿಯಲ್ಲ. ದಿನಾಂಕಃ 16.04.2017 ರಂದು ಒಂದೇ ಕರಾರು ಆಗಿದ್ದು , ಮತ್ತೊಂದು ಕರಾರು ಸಹ ಆಗಿರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ನಾನು ನಿಪಿ 1 ದಾಖಲೆಗೆ ಮದ್ಯಾಹ್ನ 12-30 ಗಂಟೆ ಸಮಯದಲ್ಲಿ ಸಹಿ ಮಾಡಿರುತ್ತೇನೆ . ಆ ಸಮಯದಲ್ಲಿ ಕೃಷ್ಣಪ್ಪ ಮತ್ತು ದೊಡ್ಡಣ್ಣ ರವರು ಸದರಿ ದಾಖಲೆಗೆ ಸಹಿ ಮಾಡಿರುತ್ತಾರೆ . ಸದರಿ ದಾಖಲೆಗೆ ನಾನು ಮೊದಲು ಸಹಿ ಮಾಡಿದ್ದು , ನನ್ನ ನಂತರ ಕೃಷ್ಣಪ್ಪ ಮತ್ತು ದೊಡ್ಡಣ್ಣ ರವರು ಸಹಿ ಮಾಡಿರುತ್ತಾರೆ . ನಿಪಿ 1 ದಾಖಲೆಗೆ ನಾನು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ . ನಿಪಿ 1 ರಂತೆ ಒಪ್ಪಂದ ನಾನು ಹೇಳಿದ ಸಮಯದಲ್ಲಿ ಆಗಿರುವುದಿಲ್ಲ ಎಂದರೆ ಸರಿಯಲ್ಲ . ನಿಪಿ 1 ದಾಖಲೆಯನ್ನು ಯಾರು ತಯಾರಿಸಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ . ನಾನು ದಿನಾಂಕಃ 06.04.2017 ರಂದು ನಿಪಿ 1 ರಂತೆ ದಾಖಲೆಯಾಗುವ ಕಾಲಕ್ಕೆ ಸ್ಥಳದಲ್ಲಿ ಇಲ್ಲದಿದ್ದರೂ ಸಹ ವಾದಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ನಿಪಿ 1 ದಾಖಲೆಯನ್ನು ಮಾಡುವಾಗ ಸಮಯ ಮದ್ಯಾಹ್ನ 12 ಗಂಟೆ ಆಗಿರುತ್ತದೆ . ನಿಪಿ 1 ದಾಖಲೆ ಮಾಡುವ ಕಾಲಕ್ಕೆ ಛಾಪ ಕಾಗದವನ್ನು ತಂದಿರುವುದಿಲ್ಲ ಎಂದರೆ ಸರಿಯಲ್ಲ .

ದಾವೆ ಕುರಿತು ನನಗೆ ಏನು ಗೊತ್ತಿಲ್ಲದಿದ್ದರೂ ಸಹ ವಾದಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ವಾದಿ ಮತ್ತು ಪ್ರತಿವಾದಿಯರು ನನ್ನ ಗ್ರಾಮದವರು ಎಂದರೆ ಸರಿ . ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇನದ ಮೇರೆಗೆ ತೆರದ ನ್ಯಾಯಾಲಯ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ತಿ ಹೇ ಸ ಇದೆ**

**ಪಿ ಸಿ ಜೆ ಮತ್ತು ಜೆ ಎಂ ಎಫ್ ಸಿ**
**ಪಾವಗಡ**